ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ದೂರವಾಣಿ : 08156-270427
ಸಣ್ಣ ನೀರಾವರಿ ವಿಭಾಗ, ಚಿಕ್ಕಬಳ್ಳಾಪುರ. ಫ್ಯಾಕ್ಸ್ : 08156-270427
ಇ-ಮೇಲ್ -eemidcbpura@gmail.com

ಸಂಖ್ಯೆ: ಕಾಸಬ/ತಾಂ.ಶಾ /ಹೆಚ್.ಎನ್.ವ್ಯಾಲಿ/ 1167 /2025. ದಿನಾಂಕ: 11/07/2025

ರವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಚಿಕ್ಕಬಳ್ಳಾಪುರ ವಿಭಾಗ,
ಚಿಕ್ಕಬಳ್ಳಾಪುರ.

ಮಾನ್ಯರೆ,

ವಿಷಯ:- Re-Diversion of 0.15 hectare of forest land in Bandahalli Village Sy No.38 and Aruru Village Sy No. 262 (Haristhala State Forest) Mandikallu Hobli, Chikkaballapur Taluk & District for laying of 490 Dia MS Pipe line for lifting/pumping secondary treated sewage water from HN Valley impounded in Kandavara Lake of Chikkaballapur District to Poornasagara kere and onwards to fill 28 tanks of Chikkaballapura, Sidlaghatta and Gudibande Taluks of Chikkaballapur District in favour of The Executive Engineer, Minor Irrigation and Ground Water Resourse Diversion, Chikkaballapur (SECONDARY USER AGENCY) from the already diverted forest land of National Highway Authority of India (PRIMARY USER AGENCY) Proposal No:FP/KA/IRRIG/45295/2022.

ಉಲ್ಲೇಖ:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ರವರ ಕಛೇರಿ ಪತ್ರದ ಸಂಖ್ಯೆ: ಎಫ್ಇಇ51ಎಫ್ಎಲ್ಎಲ್2020(ಇ), ದಿನಾಂಕ:01.07.2025.
2. ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ ರವರ ಪತ್ರ ಸಂಖ್ಯೆ:ಎ3/ಎಫ್ಸಿ/ಹೆಚ್ಎನ್ವ್ಯಾಲಿ/ಸಿ.ಆರ್-19/382/2020-21, ದಿನಾಂಕ:08.07.2022.
3. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸ.ನೀ ಮತ್ತು ಅಂ.ಅ. ವಿಶೇಷ ಉಪವಿಭಾಗ ರವರ ಪತ್ರ ಸಂಖ್ಯೆ:242/2022, ದಿನಾಂಕ:03.09.2022
4. ಈ ಕಛೇರಿ ಪತ್ರ ಸಂಖ್ಯೆ:2271/2022-23, ದಿನಾಂಕ:02.01.2023.
5. ಈ ಕಛೇರಿ ಪತ್ರ ಸಂಖ್ಯೆ:164/2024-25, ದಿನಾಂಕ:29.01.2025.
6. ಈ ಕಛೇರಿ ಪತ್ರ ಸಂಖ್ಯೆ:462/2024-25, ದಿನಾಂಕ:12.03.2025.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರಲ್ಲಿ Re-Diversion of 0.15 hectare of forest land in Bandahalli Village Sy No.38 and Aruru Village Sy No. 262 (Haristhala

State Forest) Mandikallu Hobli, Chikkaballapur Taluk & District for laying of 490 Dia MS Pipe line for lifting/pumping secondary treated sewage water from HN Valley impounded in Kandavara Lake of Chikkaballapur District to Poornasagara kere and onwards to fill 28 tanks of Chikkaballapura, Sidlaghatta and Gudibande Taluks of Chikkaballapur District in favour of The Executive Engineer, Minor Irrigation and Ground Water Resourse Diversion, Chikkaballapur (SECONDARY USER AGENCY) from the already diverted forest land of National Highway Authority of India (PRIMARY USER AGENCY) Proposal No:FP/KA/IRRIG/45295/2022 ಸಂಬಂಧ ಬಾಕಿ ಇರುವ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ಕೋರಿರುವ ಅಂಶಗಳಿಗೆ ಸರಿಸುಮಾರು ಎರಡು ವರ್ಷಗಳ ಕಾಲಾವಧಿಯ ನಂತರದಲ್ಲಿ ಮಾಹಿತಿಯನ್ನು ಒದಗಿಸುವುದರಿಂದ, ಮಾನ್ಯ ಅರಣ್ಯ ಸಚಿವರು ಗಂಭೀರವಾಗಿ ಪರಿಗಣಿಸಿ, ವಿಳಂಬಕ್ಕೆ ಕಾರಣವೇನು ಎಂಬುದರ ಕುರಿತು ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಯನ್ನು ನೀಡುವಂತೆ ನಿರ್ದೇಶಿಸಲಾಗಿರುತ್ತದೆ.

ಈ ಕುರಿತಂತೆ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ಕೆರೆಗಳನ್ನು ತುಂಬಿಸಲು ಕಂದವಾರ ಸರೋವರದಿಂದ ಪೂರ್ಣಸಾಗರ ಕೆರೆಗೆ ಸಂಸ್ಕರಿಸಿದ ನೀರನ್ನು ಎತ್ತಲು / ಪಂಪ್ ಮಾಡಲು, ಹರಿಸ್ಥಳ ಮೀಸಲು ಅರಣ್ಯ ಪ್ರದೇಶದ ಬಂಡಹಳ್ಳಿ ಗ್ರಾಮದ ಸರ್ವೇ ನಂ. 38ರಲ್ಲಿ (.0141 ಹೆ.) ಮತ್ತು ಆರೂರು ಗ್ರಾಮದ ಸರ್ವೇ ನಂ. 26ರಲ್ಲಿ (0.009 ಹೆ) ಒಟ್ಟು 0.15 ಹೆ. ಅರಣ್ಯ ಪ್ರದೇಶದಲ್ಲಿ 490 ಎಂ.ಎಂ ವ್ಯಾಸದ ಎಂ.ಎಸ್ ಪೈಪ್‌ಲೈನ್ ಅಳವಡಿಸುವ ಕಾಮಗಾರಿಯ ಕುರಿತಂತೆ ಪ್ರಸ್ತಾವನೆಯನ್ನು ಸಂಬಂಧಪಟ್ಟ ಉಪಯೋಗಿ ಸಂಸ್ಥೆಯವರು ಇ-ಪರಿವೇಶ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಸದರಿ ಯೋಜನೆಗೆ ಭಾರತ ಸರ್ಕಾರವು ಕೆಲವು ಷರತ್ತುಗಳನ್ನು ವಿಧಿಸಿ ತಾತ್ವಿಕ ಅನುಮೋದನೆ (Stage-01 Approval) ನೀಡಲಾಗಿರುತ್ತದೆ.

ಅದರನ್ವಯ ತಾತ್ವಿಕ ಅನುಮೋದನೆ (Stage-01 Approval) ರಲ್ಲಿ ವಿಧಿಸಿರುವ ಎಲ್ಲಾ 12 ಷರತ್ತುಗಳನ್ನು ಪಾಲಿಸಿ ದಾಖಲಾತಿಗಳೊಂದಿಗೆ ಅನುಪಾಲನಾ ವರದಿಯನ್ನು 2ನೇ ಹಂತದ ಪ್ರಸ್ತಾವನೆಗೆ ಈ ಕಛೇರಿಯಿಂದ ದಿನಾಂಕ:17.11.2020ರಲ್ಲಿ ಸಲ್ಲಿಸಲಾದ ವರದಿಯನ್ನು ದಾಖಲಾತಿಗಳೊಂದಿಗೆ ದಿನಾಂಕ: 24.11.2020ರಂದು ಮೇಲಾಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆ. ಅರಣ್ಯ ಹಕ್ಕು ಕಾಯ್ದೆ 2006ರ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರು ನೀಡಿರುವ ಫಾರಂ ನಂ-1ರ ಪ್ರಮಾಣ ಪತ್ರದ ಪ್ರತಿಯಲ್ಲಿ ಬಿಡುಗಡೆ ಮಾಡಲಾದ ಅರಣ್ಯ ಭೂಮಿಯ ಸರಿಯಾದ ವಿಸ್ತೀರ್ಣ ಮತ್ತು ಬಳಕೆದಾರರ ಏಜೆನ್ಸಿಯ ಹೆಸರನ್ನು ಸರಿಯಾದ ರೀತಿಯಲ್ಲಿ ಉಲ್ಲೇಖಿಸದೇ ಇರುವುದರಿಂದ ಮತ್ತೊಮ್ಮೆ ಅರಣ್ಯ ಹಕ್ಕು ಕಾಯ್ದೆ 2006ರ ಫಾರಂ ನಂ-01ರ (FRA)ರಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸಿ FC Web Portal ಮೂಲಕ ಸಲ್ಲಿಸಿ ಕನಿಷ್ಟ 3- ikn signed 3 (ಮೂರು) ಸೆಟ್ ಪ್ರತಿಯೊಂದಿಗೆ ತಮ್ಮ ಕಛೇರಿಗೆ ಸಲ್ಲಿಸಲು ಉಲ್ಲೇಖ(2)ರಲ್ಲಿ ಸೂಚಿಸಲಾಗಿರುತ್ತದೆ.

ಅದರಂತೆ ಉಲ್ಲೇಖ ಪತ್ರ (3)ರಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸ.ನೀ ಮತ್ತು ಅಂ.ಅ. ವಿಶೇಷ ಉಪವಿಭಾಗ ರವರು ಫಾರಂ ನಂ-1ರ ಪ್ರಮಾಣ ಪತ್ರದ ಪ್ರತಿಯಲ್ಲಿ ಬಿಡುಗಡೆ ಮಾಡಲಾದ ಅರಣ್ಯ ಭೂಮಿಯ ಸರಿಯಾದ ವಿಸ್ತೀರ್ಣ ಮತ್ತು ಬಳಕೆದಾರರ ಏಜೆನ್ಸಿಯ ಹೆಸರನ್ನು ಸರಿಯಾದ ರೀತಿಯಲ್ಲಿ ಅಳವಡಿಸಿ ಸಲ್ಲಿಸಲು ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಪತ್ರ ಬರೆಯುವಂತೆ ಈ ಕಛೇರಿಗೆ ಕೋರಿರುತ್ತಾರೆ.

ಅದರಂತೆ, ಉಲ್ಲೇಖ ಪತ್ರ (4) ಮತ್ತು (5)ರಲ್ಲಿ ಫಾರಂ ನಂ-1ರ ಪ್ರಮಾಣ ಪತ್ರದ ಪ್ರತಿಯಲ್ಲಿ ನ್ಯೂನತೆಗಳನ್ನು ಸರಿಪಡಿಸಿ ಸಲ್ಲಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಕೋರಲಾಗಿರುತ್ತದೆ. ಈ ಕುರಿತು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ದಿನಾಂಕ:06.03.2025ರಂದು

ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ ಸಭೆಯಲ್ಲಿ ಅರಣ್ಯ ಹಕ್ಕು ಕಾಯ್ದೆ 2006ರ ಫಾರಂ ನಂ-01ರ (FRA)ರಲ್ಲಿ ನ್ಯೂನತೆಗಳನ್ನು ಸರಿಪಡಿಸಿ ಮಾನ್ಯ ಜಿಲ್ಲಾಧಿಕಾರಿಗಳ 3- ikn signed 3 (ಮೂರು) ಪ್ರತಿಗಳನ್ನು ನೀಡಲಾಗಿರುತ್ತದೆ.

ಮುಂದುವರೆದು ನ್ಯೂನತೆಗಳನ್ನು ಸರಿಪಡಿಸಿದ ಅರಣ್ಯ ಹಕ್ಕು ಕಾಯ್ದೆ 2006ರ ಫಾರಂ ನಂ-01ರ (FRA)ರಲ್ಲಿ ಸರಿಪಡಿಸಿ FC Web Portal ಮೂಲಕ ಸಲ್ಲಿಸಿ ಮಾನ್ಯ ಜಿಲ್ಲಾಧಿಕಾರಿಗಳ 3- ikn signed 3 (ಮೂರು) ಪ್ರತಿಗಳನ್ನು ಉಲ್ಲೇಖ ಪತ್ರ (5) ರಲ್ಲಿ ತಮ್ಮ ಕಚೇರಿಗೆ ಸಲ್ಲಿಸಲಾಗಿರುತ್ತದೆ. ಆದುದರಿಂದ ಅರಣ್ಯ ಹಕ್ಕು ಕಾಯ್ದೆ 2006ರ ಫಾರಂ ನಂ-01ರ (FRA) ಪ್ರಮಾಣ ಪತ್ರ ಪಡೆಯಲು ತಡವಾಗಿ ದೊರೆತಿರುವುದರಿಂದ FC Web Portal ನಲ್ಲಿ ಸಲ್ಲಿಸಲು ವಿಳಂಭವಾಗಿರುತ್ತದೆ. ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಮಾಹಿತಿಗಾಗಿ ತರುತ್ತಾ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ
ವಿಭಾಗ, ಚಿಕ್ಕಬಳ್ಳಾಪುರ.

ಪ್ರತಿಯನ್ನು:

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ
ವಿಭಾಗ, ಚಿಕ್ಕಬಳ್ಳಾಪುರ.